ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ

ಚನ್ನಗಿರಿ .

ಸಿಸಿ ನಂ**. 1028/2025**

ಹೆಸರುಃ ಬಿಎಸ್  ಪ್ರವೀಣ್ ಚಾಸಾಃ 7

ತಂದೆಃ   ಶೇಖರಪ್ಪ ಪ್ರಾಸಾ: 4

5ವಯಸ್ಸುಃ   43ವರ್ಷ

ಉದ್ಯೋಗಃ  ಅಬಕಾರಿ ನೀರಿಕ್ಷಕರು

ವಾಸ ಸ್ಥಳಃ   ಹೊನ್ನಾಳಿ

ಸಾಕ್ಷಿಗೆ ದಿನಾಂಕಃ 20.11.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಮಾನ್ಯ ಸಸಅ ರವರಿಂದಃ**

ದಿಃ01.01.2024 ರಿಂದ ಇಲ್ಲಿಯವರೆಗೆ ನಾನು ಹೊನ್ನಾಳಿ ಉಪವಿಭಾಗದಲ್ಲಿ ಅಬಕಾರಿ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿನಾಂಕಃ 01.10.2024 ರಂದು ಚಾಸಾ 1 ರವರ ಕಡೆಯಿಂದ ಪ್ರಕರಣದ ಕಡತವನ್ನು ಮತ್ತು ಮು. ಮಾಲನ್ನು  ಪಡೆದು ಮುಂದಿನ ತನಿಖೆ ಕೈಗೊಂಡಿರುತ್ತೇನೆ.

ದಿಃ  07.10.2024 ರಂದು ಚಾಸಾ 2 ರಿಂದ 4 ರವರಿಗೆ ವಿಚಾರಣಾ ನೋಟಿಸ್ ನ್ನು ಜಾರಿ ಮಾಡಿರುತ್ತೇನೆ.

ದಿಃ 07.10.2024 ರಂದು ಆರೋಪಿಯ ವಾಸ ಸ್ಥಳದ ದೃಡೀಕರಣ ಕೋರಿ ಚಾಸಾ 6 ರವರಿಗೆ ಪತ್ರ ಬರೆದಿರುತ್ತೇನೆ. ಸದರಿ ದಾಖಲೆ ಮತ್ತು ಸಹಿಯನ್ನು **ನಿಪಿ 7, 7(ಎ)** ಎಂದು ಗುರುತಿಸಲಾಯಿತು.

ದಿಃ 14.10.2024 ರಂದು ಆರೋಪಿಗೆ ವಿಚಾರಣಾ ನೋಟಿಸ್ ನ್ನು ಜಾರಿ ಮಾಡಿರುತ್ತೇನೆ.

ದಿಃ15.10.2024 ರಂದು ಆರೋಪಿಯ ಹೇಳಿಕೆಯನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ.

ದಿಃ 24.10.2024 ರಂದು ಚಾಸಾ 4 ರವರ ಮೂಲಕ  ಚಾಸಾ 5ರವರಿಗೆ ಜಪ್ತಾದ ಮು ಮಾಲುಗಳ ರಾಸಾಯನಿಕ ಪರೀಕ್ಷೆಗಾಗಿ ನಿವೇದಿಸಿಕೊಂಡಿರುತ್ತೇನೆ. ಸದರಿ ದಾಖಲೆ ಮತ್ತು ಸಹಿಯನ್ನು **ನಿಪಿ  8, 8(ಎ)** ಎಂದು  ಗುರುತಿಸಲಾಯಿತು.

ದಿಃ 30.10.2024 ರಂದುವ ರದಿಯನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ಸದರಿ ದಾಖಲೆ ಮತ್ತು ಸಹಿಯನ್ನು **ನಿಪಿ 9, 9(ಎ)** ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ 4 ರವರ ಹೇಳಿಕೆಯನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ.

ದಿಃ 03.11.2024 ರಂದು ಚಾಸಾ 6 ರವರಿಂದ ಕೃತ್ಯ ನಡೆದ ಸ್ಥಳದ ದೃಡೀಕರಣವನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ಸದರಿ ದಾಖಲೆ ಮತ್ತು ಸಹಿಯನ್ನು **ನಿಪಿ 10, 10(ಎ)** ಎಂದು ಗುರುತಿಸಲಾಯಿತು.

ದಿಃ 13.12.2024 ರಂದು ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಮು ಮಾಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿರುವ ವಸ್ತುವನ್ನು ನೋಡಿ ಗುರುತಿಸಿದ್ದು ಅದನ್ನು ಮು ಮಾ 1 ನ್ನು ಈಗಾಗಲೇ ಗುರುತಿಸಲಾಗಿದೆ.

**ಪಾಟೀ ಸವಾಲು - ಆರೋಪಿತರ ಪರ ಶ್ರೀ ವೈ ಡಿ ಎಸ್ ವಕೀಲರಿಂದ –**

ರಾಸಾಯನಿಕ ವರದಿಯನ್ನು ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 4 ರವರ ಹೇಳಿಕೆಯನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಖಾಲಿ ಕಾಗದಕ್ಕೆ ಆರೋಪಿಯ ಸಹಿಗಳನ್ನು ಪಡೆದು ಪ್ರಕರಣಕ್ಕೆ ಅನುಕೂಲಕರವಾಗುವ ರೀತಿಯಲ್ಲಿ ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರಿಗೆ ನೋಟಿಸನ್ನು ಜಾರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೊಪಿಗಳ ವಿರುದ್ದ ಆರೋಪ ಸಾಬಿತಾಗದಿದ್ದರೂ ಸುಳ್ಳು ಅಂತಿಮ ವರದಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ, ಪ್ರಕರಣಕ್ಕೂ, ಮುಮಾಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**

**ಚನ್ನಗಿರಿ.**